ಎಮ್ ವಿ ಸಿ ನಂಃ 196/2023

ಪಿ.ಡಬ್ಲೂ 1

# 4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ ಧಾರವಾಡ.

ಸತ್ಯ ಪ್ರತಿಜ್ಞೆ ಮಾಡಿಸಲಾಯಿತುಃ 21-01-2026

**ಪಾಟೀಸವಾಲುಃ 3 ನೇ ಎದುರುದಾರರ ಪರ ವಕೀಲರಿಂದ**

ನನ್ನ ಮದುವೆಯಾಗಿ 16-17 ವರ್ಷ ಆಗಿರುತ್ತದೆ. ನನ್ನ ಗಂಡ ನನ್ನ ವಯಸ್ಸಿನವರಾಗಿದ್ದರು. ಅಪಘಾತವಾದ ಬಗ್ಗೆ ದೂರನ್ನು ನಾನೇ ಕೊಟ್ಟಿರುತ್ತೇನೆ. ನನ್ನ ಗಂಡ ಇಂಡಸ್ಟ್ರಿಯಲ್ ಪ್ರೊಟೆಕ್ಷನ ಪೊರ್ಸ ಎಜನ್ಸಿಯಲ್ಲಿ ಸೆಕ್ಯುರೆಟಿ ಗಾರ್ಡ ಆಗಿ ಕೆಲಸ ಮಾಡುತ್ತಿದ್ದ. ನಮ್ಮ ಮನೆಯವರು ಸದರಿ ಎಜನ್ಸಿಯಲ್ಲಿ ಸೆಕ್ಯುರೆಟಿ ಗಾರ್ಡ ಆಗಿ ಕೆಲಸ ಮಾಡುತ್ತಿದ್ದ ವಿಷಯ ಮಾತ್ರ ಗೊತ್ತು ಸದರಿಯವರಿಗೆ ಯಾರು ಎಲ್ಲಿ ಕೆಲಸಕ್ಕೆ ನಿಯೋಜಿಸಿದ್ದರು ನನಗೆ ಗೊತ್ತಿಲ್ಲ. ಸದರಿ ಎಜನ್ಸಿಯಲ್ಲಿ ಎಷ್ಟು ಜನ ಕೆಲಸ ಮಾಡುತ್ತಿದ್ದಾರೆ ನನಗೆ ಗೊತ್ತಿಲ್ಲ. ನಮಗೆ ಇ.ಎಸ್.ಐ ಕಾರ್ಡನ್ನು ಕೊಟಿದ್ದಿಲ್ಲ. ನನ್ನ ಗಂಡನಿಗೆ ಪ್ರತಿ ತಿಂಗಳು ರೂ.40000/- ಹಣ ಬ್ಯಾಂಕ ಖಾತೆಯ ಮೂಲಕ ಬರುತ್ತಿತ್ತು. ನನ ಗಂಡ ಹಳೇ ಹುಬ್ಬಳ್ಳಿ ಬ್ಯಾಂಚನ ಎಸ್.ಬಿ.ಐ ಖಾತೆಯಲ್ಲಿ ಹೊಂದಿದ್ದ. ನಾನು ನನ್ನ ವೇತನ ಪ್ರಮಾಣ ಪತ್ರ ಹಾಜರು ಪಡಿಸಿಲ್ಲ. ನಾನು ಮೇಲೆ ಎಜನ್ಸಿಗೆ ಹೋಗಿ ನನ್ನ ಗಂಡ ವೇತನ ಪ್ರಮಾಣ ಪತ್ರ ಕೊಡಿ ಎಂದು ಕೇಳಿಲ್ಲ. ನ್ಯಾಯಾಲಯದಲ್ಲಿ ಅರ್ಜಿ ಹಾಕಿ ಸದರಿ ವೇತನ ಪ್ರಮಾಣ ಪತ್ರ ಹಾಜರು ಪಡಿಸಲು ನಮಗೆ ಯಾವುದೇ ತೊಂದರೆ

ಎಮ್ ವಿ ಸಿ ನಂಃ 196/2023

ಪಿ.ಡಬ್ಲೂ 1

ಇಲ್ಲ. ನನ್ನ ಗಂಡನಿಗೆ ಪ್ರತಿ ತಿಂಗಳು ರೂ.11000/- ವೇತನ ಇತ್ತು ಹಾಗೂ ನಮ್ಮ ಕುಟುಂಬಕ್ಕೆ ಇ.ಎಸ್.ಐ ಕವರೇಜ ಇತ್ತು ಎಂದರೆ ನನಗೆ ಗೊತ್ತಿಲ್ಲ. ನನ ಗಂಡ ಕೆಲಸ ಮಾಡುವ ಸಮಯದಲ್ಲಿ ಮರಣ ಹೊಂದಿದ್ದಾನೆ ಎಂದರೆ ಸರಿ. ನನ್ನ ಗಂಡನಿಗೆ ಇ.ಎಸ್.ಐ ಕವರೇಜ ಇರುವ ಕಾರಣ ನಾವು ಇ.ಎಸ್.ಐ ಕಾನೂನು ಅಡಿ ಅರ್ಜಿ ಸಲ್ಲಿಸಲು ಆದ್ದರಿಂದ ಈ ಅರ್ಜಿ ಮಾನ್ಯ ಆಗುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ.

ನನ್ನ ಗಂಡನಿಗೆ ಪ್ರತಿ ತಿಂಗಳು ರೂ.40,000/- ವೇತನ ಇತ್ತು ಎಂದು ತೋರಿಸಲು ನಾನು ದಾಖಲೆ ಹಾಜರು ಪಡಿಸಿಲ್ಲ ಆದರೆ ಅವರು ಡಬಲ್ ಡ್ಯೂಟಿ ಮಾಡುತ್ತಿದ್ದರು. ನನ್ನ ಗಂಡ ಡಬಲ್ ಡ್ಯೂಟಿ ಮಾಡುತ್ತಿದ್ದ ಎಂದು ದಾಖಲೆ ಹಾಜರು ಪಡಿಸಿಲ್ಲ. ನನ್ನ ಗಂಡನ ಅಂತಿಮ ಸಂಸ್ಕಾರಕ್ಕೆ ರೂ.1,00,000/- ಖರ್ಚಾಗಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತವು ನನ್ನ ಗಂಡನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ನಾನು ಪರಿಹಾರ ಪಡೆದುಕೊಳ್ಳುವ ಉದ್ದೇಶದಿಂದ ಬೈಕ ಸವಾರನ ಅಪಘಾತ ಪಡಿಸಿದ್ದರಿಂದ ನನ್ನ ಗಂಡ ಮರಣ ಹೊಂದಿದ್ದಾನೆ ಎಂದು ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ನನಗೆ

ಎಮ್ ವಿ ಸಿ ನಂಃ 196/2023

ಪಿ.ಡಬ್ಲೂ 1

ಸಹಾಯ ಮಾಡಲು ಬೈಕ ಸವಾರನ ವಿರುದ್ಧ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

ಅಪಘಾತ ಸಮಯದಲ್ಲಿ ಬೈಕ ಚಾಲಕನಿಗೆ ಪರವಾಣಿಗೆ ಪತ್ರ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಅಪಘಾತ ಸಮಯದಲ್ಲಿ 1 ನೇ ಎದುರುದಾರರ ಬೈಕ್ ಮಾಲೀಕನಾಗಿದ್ದು ಆತನ ಹೆಸರಿಗೆ ವಿಮೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆದ್ದರಿಂದ 3 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. 2 ನೇ ಎದುರುದಾರರು ವಿಮಾ ನಿಯಮ ಉಲ್ಲಂಘಣೆ ಮಾಡಿದ್ದರಿಂದ 3 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ನಾವು ಸಲ್ಲಿಸಿದ ಅರ್ಜಿ ಕಾನೂನು ಬಾಹಿರ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ್)**
4 ನೇ ಹಿ ದಿ ನ್ಯಾ ಹಾಗೂ ಜೆಎಂಎಫ್‌ಸಿ,
ಧಾರವಾಡ.

ಎಮ್ ವಿ ಸಿ ನಂಃ 196/2023

ಪಿ.ಡಬ್ಲೂ 1